1

# ದೇವರ ಸರ್ವವ್ಯಾಪಕತೆ:

## ನಮ್ಮ ದೇವರು ಮೂಲ ಸತ್ವದಲ್ಲಿ "ಅಲ್ಲಿ" ಇರುವದಿಲ್ಲ

ದೇವರು "ಸರ್ವವ್ಯಾಪಿಯಾದಾತನು" ಎಂದು ಹೇಳಲ್ಪಟ್ಟಿದೆ. ಇದರ ಅರ್ಥ ದೇವರು ಅಸ್ತಿತ್ವದಲ್ಲಿದ್ದಾನೆ ಇಲ್ಲವೇ ಒಂದೇ ಸಮಯಕ್ಕೆ ಎಲ್ಲಾ ಕಡೆಗಳಲ್ಲಿ ಇರುವ ಜೀವವುಳ್ಳವನಾಗಿದ್ದಾನೆ ಎಂಬುದು. ಇದು ಪರಿಶುದ್ಧ ಬರಹಗಳ ಸಾಕ್ಷಿಯೂ ಆಗಿದೆ (ಯೆರೆಮೀಯ 23:23, 24). ಇದು ಹೇಗೆ ಸಾಧ್ಯ? ಏನನ್ನು ಒಳಗೊಂಡಿರುತ್ತದೆ? ದೇವರು ಎಲ್ಲಾ ಕಡೆಗಳಲ್ಲಿಯೂ ಇರುವಾತನೆಂದು ನಾವು ಹೇಳುವಾಗ, ನಾವು ವಿಶ್ವದಲ್ಲಿ ಯಾವುದೇ ಕಡೆಯಲ್ಲಿ ಪ್ರಯಾಣ ಮಾಡಿದರೂ ದೇವರಿಗೆ ಸಂಬಂಧಿಸಿ "ಖಾಲಿ ಇದೆ" ಎಂಬ ಸಂಕೇತವನ್ನು ಎಲ್ಲಿಯೂ ಕಂಡುಕೊಳ್ಳುವದಿಲ್ಲ ಎಂದರ್ಥವಾಗುತ್ತದೆ.

### ಅದರ ವಾಸ್ತವಿಕತೆ

ವಿಶ್ವವು ವಿಶಾಲವಾದದ್ದಾಗಿದೆ. ಅದರ ಮಿತಿಗಳನ್ನು ತಲುಪಲು ಸಾಕಾಗುವಷ್ಟು ನಮ್ಮ ಮನಸ್ಸುಗಳನ್ನು ಚಾಚಲು ನಮಗೆ ಸಾಧ್ಯವಾಗುವುದಿಲ್ಲ. ನಮ್ಮ ಚಿಕ್ಕ ಸೌರಮಂಡಲಿಯು ಸಾಕಷ್ಟು ವಿಶಾಲವಾಗಿರುವಂತೆ ತೋರುತ್ತದೆ. ನಾವು ಮತ್ತು ಸುಮಾರು ಅರ್ಧ ಬಿಲಿಯನ್ ಇತರ ಜನರು - ನೀಲ ಆರ್ಮಸ್ಟ್ರಾಂಗ್ ಮತ್ತು "ಬುಜ್ಜ" ಆಲ್ಡ್ರಿನ್ ಅವರು ಚಂದ್ರನ ಮೇಲೆ ನೆಗೆದಾಡುವದನ್ನು ಹರ್ಷದಿಂದಲೂ ಆಶ್ಚರ್ಯದಿಂದಲೂ ಗಮನಿಸಿದ್ದನ್ನು ಜ್ಞಾಪಿಸಿಕೊಳ್ಳಿರಿ. ಈಗ ಚಂದ್ರನ ಮೇಲೆ ಮನುಷ್ಯನ ಹೆಜ್ಜೆ ಗುರುತುಗಳು ಇರುತ್ತವೆ. ಚಂದ್ರನು ಭೂಮಿಯಿಂದ ಸುಮಾರು 250,000 ಮೈಲುಗಳು ದೂರದಲ್ಲಿದ್ದರೂ ಅದು ಇನ್ನೂ ನಮ್ಮ ವರಾಂಡದಲ್ಲಿರುವಂತೆ ಇದೆಯೆಂದು ಖಗೋಳ ಶಾಸ್ತ್ರಜ್ಞರಂತೆ ಮಾತಾಡ ಬಹುದು.

ಈಗ ಹಿತ್ತಲಿನಿಂತ ಮುಂಭಾಗಕ್ಕೆ ಬಂದು ಸುತ್ತಲೂ ನೋಡಿರಿ. ಮೇಲೆ ಸೂರ್ಯನನ್ನು ನೋಡುತ್ತೇವೆ. ಅದು ಸುಮಾರು 93 ಮಿಲಿಯ ದೂರದಲ್ಲಿದೆ. ಇತರ ಎಂಟು ಗ್ರಹಗಳು ಅದರ ಸುತ್ತಲೂ ತಿರುಗುತ್ತವೆ. ಅತೀ ಸಮೀಪದ ಬುಧಗ್ರಹವು ಸೂರ್ಯನಿಂದ ಕೇವಲ 36 ಮಿಲಿಯನ್ ಮೈಲುಗಳಷ್ಟು ದೂರದಲ್ಲಿದೆಣಿ ಅತೀ ದೂರದಲ್ಲಿರುವ ಪ್ಲೋಟೋ ಗ್ರಹವು 3.7 ಬಿಲಿಯನ್ ಮೈಲು ದೂರದಲ್ಲಿದೆ. ಒಂದು ಸಲ ಸೂರ್ಯನ ಸುತ್ತಲು ಪ್ಲೋಟೋ ಗ್ರಹವು ಸುಮಾರು 247 ಭೂಮಿ ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಇದನ್ನು ಬರೆಯುತ್ತಿರುವ ಸಮಯದಲ್ಲಿ ಖಗೋಳ ಶಾಸ್ತ್ರಜ್ಞರು ಪ್ಲೋಟೋವನ್ನು ದಾಟಿ ಇನ್ನೊಂದು ಗ್ರಹವಿದೆಯೆಂದು ದೃಢವಾಗಿ ನಂಬಿದ್ದಾರೆ. ಇಷ್ಟು ನಮ್ಮ ಹಿತ್ತಲಿನ ಬಗೆಗೆ ಇದೆ.

ಬೇಲಿಯ ಬಳಿಗೆ ಹೋಗಿ ಹೊರಗೆ, ಮೇಲೆ ನೋಡೋಣ. ಶುಭ್ರವಾದ ರಾತ್ರಿಯಲ್ಲಿ ನಾವು ಆಕಾಶವೀಥಿಯನ್ನು (Milky Way) ಕಾಣಬಹುದು. ಇದು ಸೂರ್ಯ ಹಾಗೂ ನಮ್ಮ ಎಲ್ಲಾ ಗ್ರಹಗಳು ಒಳಗೊಂಡಿರುವ ಆಕಾಶವೀಥಿಯಾಗಿದೆ. ಖಗೋಳ ಶಾಸ್ತ್ರದಲ್ಲಿ ಮಿಲ್ಟನ್ ಹುಮಾಸನ್ ಹಾಗೂ ಎಡ್ವಿನ್ ಹಬ್ಬಲ್ ಅವರಿಂದ ಆದ ಖಗೋಳ ಶಾಸ್ತ್ರದ ಸಂಶೋಧನೆಯಲ್ಲಿ ಸುಪ್ರಖ್ಯಾತರ ಸಮೂಹವು 100,000 ಬೆಳಕಿನ ವರ್ಷಗಳ

ವಿಶಾಲತೆಯದಾಗಿದೆ ಎಂಬುದು ದೃಢಪಡಿಸಲ್ಪಟ್ಟಿದೆ. ಹಬ್ಬಲ್ ಅವರೂ ಸಹ ಅನೇಕ "ಹತ್ತಿರದ" ನಕ್ಷತ್ರ ಸಮೂಹಗಳು 1 ಮಿಲಿಯದಿಂದ 7 ಮಿಲಿಯದ ವರೆಗಿನ ಬೆಳಕಿನ ವರ್ಷಗಳಷ್ಟು ದೂರದಲ್ಲಿವೆಯೆಂದು ಗಮನಿಸಿದ್ದಾರೆ.[1] ಇದಕ್ಕೆ ಕೂಡಿಸಿ ಈ ಸೌರವ್ಯೂಹಗಳು ನಿಜವಾಗಿಯೂ "ದ್ವೀಪ" ಸೌರವ್ಯೂಹಗಳಾಗಿವೆ. ಈಗಿನ ಅವಲೋಕನಕ್ಕೆ ಸಂಬಂಧಿಸಿದಂತೆ ಅವು ವಿಶ್ವದಲ್ಲೆಲ್ಲಾ ವಿಸ್ತರಿಸಿಕೊಂಡಿರುತ್ತವೆ.[2]

ಬಹಶ ನಾವು ಸಾಕಷ್ಟು ದೂರ ಹೋಗಿದ್ದೇವೆ, ವಿಶ್ವದ ವಾಸ್ತವಿಕ ಚಿತ್ರವು ಮನುಷ್ಯನನ್ನು ದಿಗಿಲುಗೊಳಿಸುವಂಥದ್ದಾಗಿದೆ. ಅದು ವಿಚಿತ್ರವಾಗಿ ವ್ಯಾಪಕವಾದಾದ್ದಾಗಿದೆ. ವಿಶ್ವದ ವಿಶಾಲತೆಯ ಸೂಚಕಗಳಲ್ಲಿ ಅದು ಹೇಗೆ ಅಳೆಯಲ್ಪಡುವುದು ಎಂಬುದು ಒಂದಾಗಿದೆ. ದೂರವನ್ನು ಮೈಲುಗಳಲ್ಲಿ ಅಳತೆ ಮಾಡುವುದು ಶ್ರಮೆದಾಯಕವಾದ ಸಾಕಾಗದ ವ್ಯಾಯಾಮವಾಗುತ್ತದೆ. ಬೆಳಕಿನ ವರ್ಷದ ಅಳತೆ ಮಾಡುವಂಥದ್ದು ಪ್ರಮಾಣವಾಗುತ್ತದೆ.

ಇದೆಲ್ಲವೂ ದೇವರ ಸ್ವಭಾವದ ಬಗೆಗಿನ ನಮ್ಮ ಅಧ್ಯಯನಕ್ಕೆ ಬಹಳ ಪ್ರಾಮುಖ್ಯವಾದದ್ದಾಗಿರುವುದು. "ಬೆಳಕಿನ ವರ್ಷ" ಎಂಬ ಮಾತು *ಸಮಯದ* ವ್ಯಕ್ತಪಡಿಸುವಿಕೆಯಾಗಿದೆ. ಆದುದರಿಂದ ಸಮಯದ ಬಗೆಗಿನ ಯೋಚನೆಗಳು ದೇವರನ್ನು ನಾವು ಅರಿತುಕೊಳ್ಳಲಿಕ್ಕೆ ನಿರ್ಣಾಯಕವಾದದ್ದಾಗಿದೆ. ಸ್ವಭಾವ ಸಿದ್ಧವಾಗಿ ಸಮಯಕ್ಕೆ ಪ್ರಾರಂಭವಿದೆ ಹಾಗೂ ಅಂತ್ಯವಿದೆ. ಅದು ಹಾಗಿರದಿದ್ದರೆ ಅದು ಸಮಯವೇ ಅಲ್ಲಣಿ ಅದು ನಿತ್ಯವಾಗಿರುವುದು. "ಸರ್ವವ್ಯಾಪಿಯಾದಾತನು" (ubiquity) ಹಾಗೂ ಅದರ ಪ್ರತಿ ಪದ "ಸರ್ವವ್ಯಾಪಕತ್ವ"ವು (omnipresence) "ಎಲ್ಲಾ ಸ್ಥಳಗಳಲ್ಲಿ ಎಲ್ಲಾ ಸಮಯಗಳಲ್ಲಿ" ದೇವರ ಪ್ರಸನ್ನತೆಯನ್ನು ಸೂಚಿಸುತ್ತದೆ. ಇದು ದೇವರೊಂದಿಗೆ ಸಾಧ್ಯವಾದದ್ದಾಗಿದೆ, ಯಾಕಂದರೆ ಮೂಲ ಸತ್ವದಲ್ಲಿ "ದೇವರು ಆತ್ಮನಾಗಿದ್ದಾನೆ" (ಯೋಹಾನ 4:24ಎ). ಆದುದರಿಂದ, ದೇವರು ಮೂಲ ಸತ್ವದಲ್ಲಿ (ಮೂಲ ಅಸ್ತಿತ್ವದಲ್ಲಿ) ಎಲ್ಲಾ ಸಮಯಗಳಲ್ಲಿ ಪ್ರತಿಯೊಂದು ಸ್ಥಳದಲ್ಲಿ ಇದ್ದಾನೆ. ಆತನು ಇಲ್ಲದೇ ಇರುವಲ್ಲಿ ಹೋಗಲು ಆತನು "ನಿರ್ಣಯಿಸುವದಿಲ್ಲ" - ಯಾಕಂದರೆ ಆತನು ಅಲ್ಲಿ ಆಗಲೇ ಇದ್ದಾನೆ! ಇದು ಬೈಬಲಿನ ಎರಡೂ ಒಡಂಬಡಿಕೆಗಳಲ್ಲಿ ಪುನ ಪುನ ವ್ಯಕ್ತಪಡಿಸಲ್ಪಟ್ಟಿದೆ(ಕೀರ್ತನೆ 2:4ಣಿ 3:4ಣಿ ಅಪೊಸ್ತಲರ ಕೃತ್ಯ 7:49ಣಿ 17:28).

## ಅದರ ಫಲಿತಾರ್ಥ

ದೇವರ ಸರ್ವವ್ಯಾಪಕತೆಯ ತತ್ವಕ್ಕೆ ಅದ್ಭುತಕರವಾದ ಫಲಿತಾರ್ಥಗಳು ಇರುತ್ತವೆ. "Omni" ಅಂದರೆ ವಿಶ್ವವ್ಯಾಪಿ, ಪ್ರಿತಿಬಂಧಗಳಿಲ್ಲದ ಎಂದರ್ಥಣಿ "omnipresence" ಎಂಬುದು "ಎಲ್ಲಾ ಸ್ಥಳಗಳಲ್ಲಿ ಎಲ್ಲಾ ಸಮಯಗಳಲ್ಲಿ ಪ್ರಸನ್ನನಾಗಿರುವುದು" ಎಂಬುದು ಶಬ್ದಾರ್ಥ ವಿವರಣೆಯಾಗಿದೆ. ದೇವರು ಸರ್ವವ್ಯಾಪಕತೆ - ಎಲ್ಲಾ ಸ್ಥಳಗಳಲ್ಲಿ ಮತ್ತು ಎಲ್ಲಾ ಸಮಯಗಳಲ್ಲಿ - ಯಾವುದೇ ಸಮಯವಾಗಲಿ ಇಲ್ಲವೇ ಯಾವುದೇ ಸ್ಥಳವಾಗಲಿ ಆತನ ಸನ್ನಿಧಿಯಿಂದ ತಪ್ಪಿಸಿಕೊಳ್ಳಲಾಗದೆಂದು ಅರ್ಥ ಮಾಡಿಕೊಳ್ಳುತ್ತೇವೆ. ದೇವರು ಸಮಯ ಇಲ್ಲವೇ ಸ್ಥಳದಿಂದ ಬಂಧಿಸಲ್ಪಟ್ಟಿರುವದಿಲ್ಲ, ಪ್ರತಿ ಬಂಧಿಸಲ್ಪಟ್ಟಿರುವದಿಲ್ಲ ಎಂದು ಬೇರೆ ಮಾತಿನಲ್ಲಿ ಹೇಳಬಹುದು (2 ಪೇತ್ರ 3:8ಣಿ ಕೀರ್ತನೆ 139:7-10). ಸಮಯದ ಅತೀದೊಡ್ಡ ಉದಾಹರಣೆಯು ನಾವು ಚರಿತ್ರೆಯೆಂದು ಕರೆಯಲ್ಪಡುವಂಥದ್ದು ಆಗಿರಬಹುದು. ಚರಿತ್ರೆಯಲ್ಲಿ "ಸಮಯವು ಸಾಗುತ್ತದೆ. ಇದು ಕೇವಲ ಒಂದು ಸಂಗತಿಯ ನಂತರ ಒಂದು ಸಂಗತಿ" ಎಂದು ಆಗಾಗ ನಾವು ಹೇಳುತ್ತೇವೆ. ಘಟನೆಗಳ ಸರಣಿಯು ನಮಗೆ ಹೆಚ್ಚು ಅರ್ಥಕೊಡುವಂಥದ್ದಾಗಿದೆ, ಯಾಕಂದರೆ ಈ ಭೂಮಿಯ

ಮೇಲೆ ನಾವು ಸಮಯದಿಂದ ಬಂಧಿತರಾದ ಜೀವಿಗಳಾಗಿದ್ದೇವೆ.

ಸ್ಥಳವೂ ಸಹ ನಮಗೆ ಬಹಳ ಮಹತ್ವದ್ದಾಗಿದೆ, ಯಾಕಂದರೆ ನಾವು ಅಪರಿಮಿತರಲ್ಲ, ಆದರೆ ಮಿತಿಯುಳ್ಳವರಾಗಿದ್ದೇವೆ. ನಾವು ಇಲ್ಲಿ ಜೀವಿಸುವಾಗ, ನಾವು ಸಮಯ ಮತ್ತು ಸ್ಥಳಗಳೆರಡರಿಂದ ಮಿತಿಗೊಳಿಸಲ್ಪಟ್ಟಿದ್ದೇವೆ. ನಮ್ಮಲ್ಲಿ ಪ್ರತಿಯೊಬ್ಬರೂ ಭೂಗೋಳ ಶಾಸ್ತ್ರದ ಪುಟದ ಮೇಲೆ ಒಂದು ಚುಕ್ಕೆಯಾಗಿದ್ದೇವೆ ನಾವು ಯಾವಾಗಲೂ "ಇಲ್ಲಿ" - "ಅಲ್ಲಿ" ಎಂದೂ ಇಲ್ಲದವರಾಗಿದ್ದೇವೆ. ಯಾವುದೇ ಸ್ಪಷ್ಟವಾದ ಸಮಯದಲ್ಲಿ ನಾವು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ನಾವಿರುತ್ತೇವೆ. ಆ ಕ್ಷಣದಲ್ಲಿ ಆ ಸ್ಥಳವು ನಮ್ಮ "ಇಲ್ಲ" ಆಗಿರುತ್ತದೆ. ಆದರೆ "ಅಲ್ಲಿ" ಎಂಬಂದೂ ನಮ್ಮದಲ್ಲ. "ಅಲ್ಲಿ" ಇರುವದನ್ನು ನಾವು ಯೋಚಿಸಬಹುದು. ಹಾಗಿದ್ದರೂ, ನಮ್ಮ "ಇಲ್ಲಿ" ಯೆಂಬುಂದು ಯಾವುದೇ ಪ್ರತ್ಯೇಕವಾದ ಸ್ಥಳದಲ್ಲಿ ಯಾವುದೇ ಕೊಡಲ್ಪಟ್ಟ ಸಮಯದಲ್ಲಿ ಇರುತ್ತೇವೆ.

ಈ ಚರ್ಚೆಯು ದೇವರ ಸರ್ವವ್ಯಾಪಕತ್ವದೊಂದಿಗೆ ನಾವು ಮಿತಿಯುಳ್ಳ ವರಾಗಿರುವದನ್ನು ವಿವರಿಸುವುದೂ ಮತ್ತು ಭಿನ್ನತೆಯನ್ನು ತೋರಿಸುವುದೂ ಆಗಿರುತ್ತದೆ. ಆತನು ಸಮಯದಿಂದ ಇಲ್ಲವೇ ಸ್ಥಳದಿಂದ ಬಂಧಿಸಲ್ಪಟ್ಟಿರುವದಿಲ್ಲಣಿ ಇಲ್ಲಿ ನಾವು ಸಮಯ ಮತ್ತು ಸ್ಥಳದಿಂದ ಬಂಧಿಸಲ್ಪಟ್ಟವರಾಗಿ ಜೀವಿಸುತ್ತೇವೆ. ದೇವರು ಸಮಯ ಮತ್ತು ಸ್ಥಳದಿಂದ ಮಿತಿಗೊಳಿಸಲ್ಪಟ್ಟಿರುವದಿಲ್ಲ. ಯಾಕಂದರೆ ಆತನು ನಿತ್ಯನಾಗಿದ್ದಾನೆ (ಯೆಶಾಯ 57:15). ಆತನು ತನ್ನ ಸರ್ವ ವ್ಯಾಪಕತ್ವದಲ್ಲಿ ಸಮಯ ಹಾಗೂ ಸ್ಥಳ ಎರಡನ್ನು ಆವರಿಸುಗೊಂಡವನಾಗಿರುತ್ತಾನೆ. ಹಾಗಿದ್ದರೂ ತನ್ನ ನಿತ್ಯ ಸ್ವಭಾವದಲ್ಲಿ ಸಮಯ ಮತ್ತು ಸ್ಥಳ ಎರಡನ್ನು ದಾಟಿದವನಾಗಿದ್ದಾನೆ. ನಾನು ಇರುವಾತನೇ ಆಗಿದ್ದೇನೆ ಎಂಬಷ್ಟು ತನ್ನನ್ನು ಪ್ರಕಟಿಸಿಕೊಂಡದ್ದರ ಮಹತ್ವವು ಇದಾಗಿದೆ. *ಯಾಹ್ವೆ* ಎಂಬುದು ನಿಜವಾಗಿಯೂ "ಇರು" (to be) - ಅಸ್ತಿತ್ವದಲ್ಲಿ ಇರು ಎಂಬ ಕ್ರಿಯಾಪದದ ಒಂದು ರೂಪವಾಗಿದೆ.

ನಿತ್ಯವಾದ ದೇವರಾಗಿ, ಆತನಿಗೆ "ಭೂತಕಾಲವು" ಇಲ್ಲ, "ಭವಿಷತ್ಕಾಲವು" ಇಲ್ಲ. "ಭೂತಕಾಲ" ಮತ್ತು "ಭವಿಷ್ಯತ್ಕಾಲ" ಎರಡೂ ಸಮಯದ ಉಡಿಗೆತೊಡಿಗೆಯೊಂದಿಗೆ ಅಲಂಕರಿಸಲ್ಪಟ್ಟ ತತ್ವಗಳಾಗಿವೆ. ಸಮಯ ಮತ್ತು ನಿತ್ಯತ್ವ ಎರಡೂ ಒಂದೇ ಸಂಗತಿಗಳಲ್ಲ. ನಿತ್ಯತ್ವವು "ದೀರ್ಘವಾದ ಸಮಯವಲ್ಲ." ನಿತ್ಯತ್ವವು ಯಾವಾಗಲೂ ಇರುವಂಥದ್ದು, ಅದಕ್ಕೆ ಪಾರ್ರಂಭವೂ ಇಲ್ಲ, ಅಂತ್ಯವೂ ಇಲ್ಲ. ದೇವರು "ಆದಿಯೂ ಅಂತ್ಯವೂ" ಆಗಿದ್ದಾನೆ (ಪ್ರಕಟನೆ 1:8). ಅಂದರೆ, ಆತನು ಸಮಯ ಮತ್ತು ಚರಿತ್ರೆಯಲ್ಲಿ ಪ್ರವೇಶಿಸಿ ಕಾಲಬದ್ಧ ವಾಸ್ತವಿಕತೆಯ ಭಾವನೆಯನ್ನು ನಮಗೆ ಕೊಟ್ಟನು. ಅಂತ್ಯದಲ್ಲಿ ಆತನು ಸಮಯವನ್ನೂ ಮತ್ತು ಚರಿತ್ರೆಯನ್ನೂ ಹೊರಗೆ ಹಾಕಿ ನಿತ್ಯತ್ವದ ಪೂರ್ಣವಾದ ಮತ್ತು ನಿಜವಾದ ಭಾವನೆಯನ್ನು ನಮಗೆ ಕೊಡುವನು. ಸಮಯವನ್ನೂ ಚರಿತ್ರೆಯನ್ನೂ ಇರಲು ತಂದಾತನು ಸಮಯವನ್ನೂ ಚರಿತ್ರೆಯನ್ನೂ ಮೀರಿ ಇರುವಾತನು ಎಂಬುದನ್ನು ಒತ್ತಿ ಹೇಳಬೇಕು.

## ಸಾರಾಂಶ

ದೇವರ ಮೂಲಸತ್ವವು ಆತ್ಮವಾಗಿರುವುದು. ದೇವರು ಸಯಮದಲ್ಲಿ ಯಾವಾಗಲೂ ಇರುವಾತನು (ಕಾಲಬದ್ಧನಾಗಿ) ಅಷ್ಟೇ ಅಲ್ಲ, ಆದರೆ ಆತನು ವಿಶ್ವದಲ್ಲಿ ಯಾವಾಗಲೂ ಇರುವಾತನು (ವಿಶಾಲವಾಗಿ) ಆಗಿದ್ದಾನೆ. ಆತನು ನಿತ್ಯವಾಗಿ ಅಸ್ತಿತ್ವದಲ್ಲಿರುವನೆಂದು ಬೈಬಲ್ ಒಪ್ಪಿಕೊಳ್ಳುತ್ತದೆಣಿ ಅಂದರೆ ಸಮಯ (ಚರಿತ್ರೆ) ಮತ್ತು ಸ್ಥಳ (ಸೃಷ್ಟಿ)ಗಳನ್ನೊಳ ಗೊಂಡು ಯಾವುದೇ ಮೇರೆಗಳನ್ನು ದಾಟಿ ಆತನು ಅಸ್ತಿತ್ವದಲ್ಲಿರುವನು.

ಸಮಯ ಮತ್ತು ಸ್ಥಳದ ನಮ್ಮ ಮಿತಿಯುಳ್ಳ ತತ್ವಗಳಲ್ಲಿ ದೇವರ ಬಗ್ಗೆ "ಇಲ್ಲಿ" ಅಥವಾ "ಅಲ್ಲಿ" ಎಂದು ಮಾತಾಡುತ್ತೇವೆ. ಹಾಗೆಯೇ ನಾವು ನೋಡಿದಂತೆ ಬೈಬಲ್ ಬರಹಗಾರರೂ ಮಾತಾಡುತ್ತಾರೆ. ಈ ರೀತಿಯಲ್ಲಿ ದೇವರ ಬಗ್ಗೆ ಮಾತಾಡುವುದು ಸಮಯದಿಂದ ಬಂಧಿತವಾದ ಮತ್ತು ಸ್ಥಳದಿಂದ ಬಂಧಿತವಾದ ಜೀವಿಗಳು ಮಾತಾಡುವುದು ಅಗತ್ಯವಾಗಿದೆ. ಹಾಗೆಯೇ ಆತನ ಬಗ್ಗೆ ನಿತ್ಯನೆಂದೂ ಮಾತಾಡುತ್ತೇವೆ. ನಾವು ಹಾಗೆ ಮಾಡುತ್ತೇವೆ, ಯಾಕಂದರೆ ದೇವರು ಮೂಲ ಸತ್ವದಲ್ಲಿ ಸಮಯ ಮತ್ತು ಸ್ಥಳದಲ್ಲಿ ಇರುವಾತನೂ ಹಾಗೆಯೇ ಸಮಯ ಮತ್ತು ಸ್ಥಳವನ್ನು ದಾಟಿ ಇರುವಾತನೂ ಆಗಿದ್ದಾನೆ. ಆತನ ದೃಷ್ಟಿಕೋನದಿಂದ ಆತನು ಯಾವಾಗಲೂ "ಇಲ್ಲಿ" ಈಗ ಇರುವನು. ಆತನು "ಅಲ್ಲಿ" ಇರುವನೋ? ಎಂಬ ನಮ್ಮ ವಿಚಾರಣೆಗೆ ಆತನ ಉತ್ತರವು "ಹೌದು, ನಾನು ಇಲ್ಲಿ 'ಇರುತ್ತೇನೆ' " ಎಂದಾಗಿರುತ್ತದೆ. ವಿಶ್ವವನ್ನು ದಾಟಿ ಇರುವ (ಇದ್ದರೆ) ಸ್ಥಳದ ಬಗ್ಗೆ ನಾವು ಯೋಚಿಸುತ್ತಿದ್ದಂತೆ, ವಿಶ್ವದ ಬಗ್ಗೆ, ನಮ್ಮ ಸ್ವಂತ ಜಗತ್ತಿನ ಬಗ್ಗೆ ಇಲ್ಲವೇ ನಮ್ಮ ಜೀವಿತಗಳ ಬಗ್ಗೆ ಇದು ಸತ್ಯವಾಗಿರುತ್ತದೆ. ಈ ದೇವರಲ್ಲಿ ನಾವು "ಜೀವಿಸುತ್ತೇವೆ, ಚಲಿಸುತ್ತೇವೆ ಹಾಗೂ ಅಸ್ತಿತ್ವದಲ್ಲಿರುತ್ತೇವೆ" (ಅಪೊಸ್ತಲರ ಕೃತ್ಯ 17:28). ನಮ್ಮ ದೇವರು ಬಹಳ ಚಿಕ್ಕವನಾಗಿರುವನೋ? ಇಲ್ಲ. ಆದರೆ ಆತನನ್ನು ಸಂಪೂರ್ಣವಾಗಿ ನೋಡುವುದಕ್ಕೆ, ಈಗಿನ ಮಟ್ಟಿಗಾದರೂ ನಮ್ಮ ಸಾಮರ್ಥ್ಯವು ಕೊರತೆಯುಳ್ಳದ್ದಾಗಿರುತ್ತದೆ.

ಕೀರ್ತನೆಗಾರನು ಮನುಷ್ಯನ ಮಿತಿಗಳನ್ನು ಅರಿತುಕೊಂಡನು ಹಾಗೂ ದೇವರ ಮಿತಿಯಿಲ್ಲದಿರುವಿಕೆಯನ್ನು ಗುರುತಿಸಿದನು. ಈ ತತ್ವಗಳನ್ನು ಅವನು ಕೀರ್ತನೆ 139:7-12ರಲ್ಲಿ ಪ್ರಕಟಪಡಿಸಿದ್ದಾನೆ:

> ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ?
> ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ?
> ಮೇಲಣ ಲೋಕಕ್ಕೆ ಏರಿ ಹೋದರೆ ಅಲ್ಲಿ ನೀನಿರುತ್ತೀಣಿ
> ಪಾತಾಳಕ್ಕೆ ಹೋಗಿ ಮಲಗಿಕೊಂಡೇನಂದರೆ ಅಲ್ಲಿಯೂ
> ನೀನಿರುವಿ.
> ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ
> ಸಮುದ್ರದ ಕಟ್ಟಕಡೆಯಲ್ಲಿ ವಾಸ ಮಾಡೇನಂದರೆ
> ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವುದುಣಿ
> ನಿನ್ನ ಬಲಗೈ ನನ್ನನ್ನು ಹಿಡಿದಿರುವದು.
> ಕಾರ್ಗತ್ತಲೆಯು ನನ್ನನ್ನು ಕವಿಯುವದು,
> ಹಗಲು ಹೋಗಿ ನನ್ನ ಸುತ್ತಲು ಇರುಳಾಗುವದು
> ಎಂದು ಹೇಳಿಕೊಂಡರೇನು?
> ನಿನಗೆ ಕತ್ತಲೆಯು ಕತ್ತಲೆಯಲ್ಲಣಿ
> ಇರುಳು ಹಗಲಾಗಿಯೇ ಇರುತ್ತದೆಣಿ
> ಕತ್ತಲು ಬೆಳಕುಗಳೆರಡೂ ನಿನಗೆ ಒಂದೇ.

---

ಟಿಪ್ಪಣಿಗಳು

[1]ಒಂದು ಬೆಳಕಿನ ವರ್ಷ ಅಂದರೆ ಒಂದು ವರ್ಷದಲ್ಲಿ ಬೆಳಕು ಪ್ರಯಾಣ ಮಾಡುವ ಅಂತರ, ಪ್ರತಿ ಸೆಕೆಂಡು 186,000 ಮೈಲು ವೇಗದಲ್ಲಿ ಹೋಗುವುದು. ಇದರ ಒಟ್ಟು 5.9 ಟ್ರಿಲಿಯನ್ ಮೈಲುಗಳಾಗುತ್ತದೆ. [2]Robert Jastrow, *God and the Astronomers* (New York: W. W. Norton, 1978), 41ff.